# IV Semester B.C.A. Examination, April/May 2015
# (Fresh + Repeaters) (2012-13 and Onwards)
## ಕನ್ನಡ ಭಾಷೆ – IV
## ಸಾಹಿತ್ಯ ಸಲ್ಲಾಪ - ೨

Time : 3 Hours Max. Marks : 100

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : (5×1=5)

1) ತಾಯೆ ಬಾ ಗಾಂಧಾರಿ ಮನದಲಿ ನೋಯದಿರು – ಈ ವಾಕ್ಯವನ್ನು ಹೊಸಗನ್ನಡದಲ್ಲಿ ಬರೆಯಿರಿ.

2) ಬಸಲಿಂಗಪ್ಪನವರೇ ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ – ಈ ವಾಕ್ಯದ ವಚನ ದೋಷ ಸರಿಪಡಿಸಿ ಬರೆಯಿರಿ.

3) ಈರಮ್ಮ ತನ್ನ ಸೋದರ ಮಾವನ ಜೊತೆ ಸಂಜೆಯಷ್ಟೆ ಬಂದನು – ಈ ವಾಕ್ಯದ ಲಿಂಗ ದೋಷವನ್ನು ಬದಲಿಸಿ ಬರೆಯಿರಿ.

4) ನಾಲ್ಕೈದು ಬಾರಿ ನೋಟು ಪದೇ ಪದೇ ಎಣಿಸಿಕೊಂಡ – ಈ ವಾಕ್ಯದಲ್ಲಿ ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಬರೆಯಿರಿ.

5) ಹೊಲಗಳಲ್ಲಿ ಹೊಡೆದಾಟ ನಡೆಯಿತು – ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಿಸಿ ಬರೆಯಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : (5×1=5)

1) ವೈರಿಯ ಸೆರೆ ಹಿಡಿಯಲಿಕ್ಕೆ ಸೇವಕರನ್ನು ಕರೆತರಲೇ ? ಈ ವಾಕ್ಯವನ್ನು ಹೇಳಿಕೆಯಾಗಿ ಪರಿವರ್ತಿಸಿ.

2) ಸ್ತ್ರೀ ಭ್ರೂಣ ಹತ್ಯೆಗಳು ಇಂದು ನಡೆಯುತ್ತಿವೆ. ಅವುಗಳ ವೇಗ ಗಾಭರಿ ಹುಟ್ಟಿಸುತ್ತಿದೆ – ಇದನ್ನು ಒಂದೇ ವಾಕ್ಯವಾಗಿ ಬರೆಯಿರಿ.

3) ಸಿಕ್ಕು ಸಿಕ್ಕಿದ ದಿಕ್ಕಿಗೆ ಓಡಿ, ಅನೇಕ ಕಡೆಗಳಲ್ಲಿ ಅನೇಕರ ಆಶ್ರಯವನ್ನು ಪಡೆಯುತ್ತಾರೆ – ಈ ವಾಕ್ಯವನ್ನು ಎರಡು ವಾಕ್ಯಗಳಾಗಿ ಬಿಡಿಸಿ ಬರೆಯಿರಿ.

4) ಸಮಾವೇಶದ ಮಹತ್ವವನ್ನು ನಿಮ್ಮ ವರ್ಗಗಳಿಗೆ ಮನಗಾಣಿಸಿಕೊಟ್ಟರು – ಈ ವಾಕ್ಯವನ್ನು ಪ್ರಶ್ನೆಯಾಗಿ ಪರಿವರ್ತಿಸಿ ಬರೆಯಿರಿ.

5) ಅಯ್ಯೋ ನೀನು ಸಾಮಾನ್ಯ ಹೆಣ್ಣಲ್ಲ ದೇವತೆ – ಈ ವಾಕ್ಯಕ್ಕೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿ ಬರೆಯಿರಿ.

III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : (5×1=5)

1) ಕಾಲುಕೀಳು – ಈ ನುಡಿಗಟ್ಟನ್ನು ಬಳಸಿ ಒಂದು ವಾಕ್ಯ ರಚಿಸಿ.

2) ಜನಸಾಗರ – ಈ ರೂಪಕ ಬಳಸಿ ಒಂದು ವಾಕ್ಯ ರಚಿಸಿ.

3) ಹಾವಿನಂತಹ ಜಡೆ – ಇದೇ ರೀತಿಯ ಬೇರೊಂದು ಉಪಮೆಯನ್ನು ಬರೆಯಿರಿ.

4) ಬಸ್ ಅಲ್ಲಿ ಕಂಡೆಕ್ಟರ್‌ನಿಂದ ಟಿಕೆಟ್ ಪಡೆದು ಪ್ರಯಾಣ ಬೆಳೆಸಿದೆ – ಇದೇ ರೀತಿಯ ನುಡಿಬೆರಕೆ ಇರುವ ಒಂದು ವಾಕ್ಯ ರಚಿಸಿ.

5) 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು' – ಈ ರೀತಿಯ ಒಂದು ಘೋಷ ವಾಕ್ಯ ರಚಿಸಿ.

IV. ಈ ಪದ್ಯಭಾಗದ ಭಾವಾರ್ಥವನ್ನು ಬರೆಯಿರಿ : (1×5=5)

ಹರಿದರಗಲಕೆ ನಾರಿಯರು ಕುರು
ಧರಣಿಯಲಿ ತಂತಮ್ಮ ಪತಿಗಳ
ಕರಿಗಳಲಿ ತುರಗದಲಿ ರಥದಲಿ ಕಂಡರಲ್ಲಲ್ಲಿ
ಶಿರವ ಮುಂಡಾಡಿದರು ಹೆಣನಲಿ
ಹೊರಳಿದರು ವಿವಿಧ ಪ್ರಳಾಪದ
ಪರಿತವವನೆಂತರಿದರೋ ವರ್ಣಿಸುವಡರಿದೆಂದ.

V. ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×6=12)

1) ಕುಂತಿ
2) ಪಿ. ಲಂಕೇಶ್
3) ದಿವ್ಯ.

VI. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (4×5=20)

1) ಹೆರಿಗೆ ನೋವನ್ನು ತಿನ್ನುತ್ತಿದ್ದ ಕೆಂಚಮ್ಮ ಸೂಲಗಿತ್ತಿಯರಿಗೆ ಏನೇನು ಕೊಡುವೆನೆಂದು ಹೇಳುತ್ತಾಳೆ ?

ಅಥವಾ

ಅಕ್ಕ ದಿಗಂಬರೆಯಾಗಿ ಹೊರಟದ್ದು ಪುರುಷ ಸಮಾಜಕ್ಕೆ ತೋರಿದ ಪ್ರತಿಭಟನೆಯೇ ? ವಿವರಿಸಿ.

2) 'ವೈಜ್ಞಾನಿಕ ನಿಲುವುಗಳ ಅಗತ್ಯವಿದೆ' – ಎಂಬುದನ್ನು 'ಶಕುನ' ಕತೆಯ ಹಿನ್ನಲೆಯಲ್ಲಿ ಬರೆಯಿರಿ.

ಅಥವಾ

ಪ್ರಚಲಿತವಿರುವ ಮೂಢನಂಬಿಕೆಗಳ ಬಗೆಗೆ ನಿಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿ.

3) ಜವಳಿ ಸಾವಿನ ಹಿಂದಿರುವ ಕಾರಣಗಳನ್ನು ವಿವರಿಸಿ.

ಅಥವಾ

ರಾಜಮಾತೆ ತನ್ನ ಮಗನ ಸುಖಕ್ಕಾಗಿ ಪಟ್ಟ ಕಷ್ಟಗಳನ್ನು ವಿವರಿಸಿ.

4) ನಿಮ್ನ ವರ್ಗಗಳಿಗೆ ಅಂಬೇಡ್ಕರ್ ಸೂಚಿಸಿದ ಶುದ್ಧಿ ಸೂತ್ರಗಳಾವುವು ?

ಅಥವಾ

'ಮಾತೃದೇವೋಭವ' ಎನ್ನುವ ನಾಡಿನಲ್ಲಿ ಹೆಣ್ಣು ಎದುರಿಸುತ್ತಿರುವ ದೌರ್ಜನ್ಯಗಳೇನು ?

VII. ಈ ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ : (4×12=48)

1) ಮುನ್ನಿನವರೇ ಮಂತ್ರಿ ಸಚಿವರು – ಕಾವ್ಯಭಾಗ ಯುದ್ಧ ವಿರೋಧೀ ಧೋರಣೆಯನ್ನು ಪ್ರಕಟಿಸುತ್ತದೆಯೇ ? ವಿಚಾರ ಮಾಡಿ.

ಅಥವಾ

'ಹೆಣ್ಣಿನ ಬದುಕು ಘೋರ' – ಎಂಬುದನ್ನು 'ಅಕ್ಕ' ಕವಿತೆಯ ಹಿನ್ನಲೆಯಲ್ಲಿ ವಿವರಿಸಿ.

2) 'ಕಿವುಡ ನಾಯಿಯಾದ ಪ್ರಸಂಗ' ಕಥೆಯಲ್ಲಿ ಹಸಿವಿನ ಚಿತ್ರಣ ಹೇಗೆ ಮೂಡಿ ಬಂದಿದೆ ? ವಿವರಿಸಿ.

ಅಥವಾ

ಜಾತಿಗರ್ವದಿಂದ ಬಸಲಿಂಗ ಅನುಭವಿಸಿದ ತೊಂದರೆಗಳನ್ನು ನಿರೂಪಿಸಿ.

3) ಶಿವನಾಗದೇವನ ಬದುಕಿನ ಸಂಘರ್ಷಗಳನ್ನು ವಿವರಿಸಿ.

ಅಥವಾ

ಅವಳಿ–ಜವಳಿ – ಇವರ ಪಾತ್ರ ಪರಿಚಯ ಮಾಡಿಕೊಡಿ.

4) ದಲಿತರು ಮತ್ತು ಸವರ್ಣೀಯರ ನಡುವೆ ಗಲಭೆ ನಡೆಯುವ ಸಂದರ್ಭದಲ್ಲಿ ಅಂಬೇಡ್ಕರ್ ಅವರ ನಿಲುವುಗಳು ಹೇಗಿತ್ತು ಎಂಬುದನ್ನು ಚಿತ್ರಿಸಿ.

ಅಥವಾ

ವೈಜ್ಞಾನಿಕ ಯುಗದಲ್ಲಿಯೂ ಬೇರೆ ಬೇರೆ ರೀತಿಯ ಹರಕೆಗಳನ್ನು ತೀರಿಸುವವರನ್ನು ಕಂಡಾಗ ಲೇಖಕರ ಪ್ರತಿಕ್ರಿಯೆ ಏನಾಗಿತ್ತು ? ವಿವರಿಸಿ.

———————